# ಕರ್ನಾಟಕವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 695 |
| ಮಾನ್ಯ ಸದಸ್ಯರ ಹೆಸರು | ಶ್ರೀಘೋಟ್ನೆಕರ್ ಶ್ರೀಕಾಂತಲಕ್ಷ್ಮಣ |
| ಉತ್ತರಿಸಬೇಕಾದ ದಿನಾಂಕ | 17.12.2021 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಮರಾಠಾ ಸಮಾಜದ ಶೈಕ್ಷಣಿಕ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಅಧ್ಯಯನವನ್ನು ದಿನಾಂಕ: 24.09.2012 ಮತ್ತು 25.09.2012 ರಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಖುದ್ದಾಗಿ ಪರಿಶೀಲಿಸಿ 30.12.2012ಕ್ಕೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ನೀಡಿ ಪ್ರಸ್ತುತ "III B" ಯಿಂದ "IIA" ಗೆ ಶಿಫಾರಸ್ಸನ್ನು ಮಾಡಿದ್ದು ರಾಜ್ಯ ಸರ್ಕಾರವು ಮರಾಠಾ ಸಮುದಾಯದವರನ್ನು "II A" ಗೆ ಸೇರಿಸುವಲ್ಲಿ ಇಲ್ಲಿಯವರೆಗೆ ವಿಳಂಬ ಮಾಡಿರುವ ಬಗ್ಗೆ ಸೂಕ್ತ ವಿವರವನ್ನು ಸರ್ಕಾರ ನೀಡುವುದೇ; (ವಿವರನೀಡುವುದು) | ಶ್ರೀ ಶಂಕ್ರಪ್ಪ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರದ ಆದೇಶ ಸಂಖ್ಯೆ: ಸಕಇ225ಬಿಸಿಎ2000ದಿನಾಂಕ: 30.03.2002 ರಪ್ರವರ್ಗ-IIIಬಿ ನಲ್ಲಿರುವ ಮರಾಠ ಜನಾಂಗವನ್ನು ಪ್ರವರ್ಗ-II ಎ ಗೆ ಸೇರಿಸಲು ತನ್ನ ಪ್ರಥಮ ವರದಿ-2012ರಲ್ಲಿನ ಸಲಹೆ ಸಂಖ್ಯೆ:02/2012 ರಲ್ಲಿ ಈ ಕೆಳಗಿನಂತೆ ಸಲಹೆ ನೀಡಿರುತ್ತದೆ.<br><br>"ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ, 1995ರ ಪರಿಚ್ಛೇಧ9(1) ರಲ್ಲಿ ಪ್ರದತ್ತವಾದ ಅಧಿಕಾರದಂತೆ ಪ್ರಸ್ತುತ ಜಾರಿಯಲ್ಲಿರುವ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002 ರ ಪಟ್ಟಿಯಲ್ಲಿ ಪ್ರವರ್ಗ-III ಬಿ ನಲ್ಲಿ ಸೇರಿರುವ ಕ್ರಮ ಸಂಖ್ಯೆ: 2 (a) ಮರಾಠ, ಮರಾಠ, (b) ಅರೆಕ್ಷತ್ರಿ, ಅರೆಮರಾಠ, ಆರ್ಯಮರಾಠ (c) ಆರ್ಯ, ಆರ್ಯರು (d) ಕೊಂಕಣಮರಾಠ (e) ಕ್ಷತ್ರಿಯಮರಾಠ (f) ಕುಳವಾಡಿ ಮತ್ತು ಅರೇರ ಜನಾಂಗವನ್ನುಪ್ರವರ್ಗ-2 'ಎ'ಗೆ ಸೇರಿಸಬೇಕೆಂದು ಈ ಮೂಲಕ ಆಯೋಗವು ಕರ್ನಾಟಕ ಸರ್ಕಾರಕ್ಕೆ ಸಲಹೆ ನೀಡುತ್ತದೆ.<br><br>ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ. |
| ಆ) | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮರಾಠಾ ಸಮಾಜದವರಿಗೆ ಅನುಕೂಲ ಮಾಡಿಕೊಡಲು ಪ್ರತಿ ಬಾರಿ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸುತ್ತಿದ್ದು ಕಳೆದ 10 ವರ್ಷಗಳಿಂದ ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಳ್ಳದಿರುವುದು ಸಮಾಜ ಬಂಧವರಿಗೆ ಅನ್ಯಾಯವಾಗಿಲ್ಲವೆ; ಅಗತ್ಯಕ್ರಮಕೈಗೊಳ್ಳಬೇಕಾಗಿರುವ ಕಾಲಾವಕಾಶವೆಷ್ಟು: (ವಿವರ ನೀಡುವುದು) | ಉದ್ಭವಿಸುವುದಿಲ್ಲ |

ಸಂಖ್ಯೆ: ಹಿಂವಕ333ಬಿಸಿಎ 2021

(ಕೋಟಾ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು